ಒಬ್ಬ ಯುವಕ ಸಿಟಿಬಸ್ಸಿನಲ್ಲಿ ಒಬ್ಬ ಯುವತಿಯನ್ನು ತುಂಬ ಸಮಯದಿಂದ ಗುರುಗುಟ್ಟಿ ನೋಡುತ್ತಿದ್ದ. ಅದನ್ನು ಗಮನಿಸಿದ ಅವಳು 'ನಿನಗೆ ಅಕ್ಕ ತಂಗಿಯರಿಲ್ಲವೆ?' ಎಂದು ಕೇಳಿದಳು

ಯುವಕ: ನನಗೊಬ್ಬ ತಂಗಿ ಇದ್ದಾಳೆ. ಆದರೆ ಅವಳಿಗೆ ಒಬ್ಬ ಅತ್ತಿಗೆ ಬೇಕಾಗಿದ್ದಾಳೆ.

★★★

ತನ್ನ ಮಗ ಜೀನ್ಸ್ ಪ್ಯಾಂಟಿನ ಬಟನ್ ಹೊಲಿಯುತ್ತಿರುವುದನ್ನು ಕಂಡ ತಂದೆ 'ನಾನು ನಿನಗೆ ಮದುವೆ ಮಾಡಿದೆ. ಸೊಸೆಯನ್ನು ಮನೆಗೆ ತಂದೆ. ಆದರೂ ನಿನ್ನ ಪ್ಯಾಂಟಿನ ಬಟನನ್ನು ನೀನೇ ಹೊಲಿದುಕೊಳ್ಳುತ್ತಿರುವೆಯಲ್ಲ?' ಎಂದು ಕೇಳಿದ.

ಮಗ: ಅಪ್ಪ, ನೀವು ತಪ್ಪು ತಿಳಿದುಕೊಂಡಿದ್ದೀರಾ, ಈ ಪ್ಯಾಂಟು ನನ್ನದಲ್ಲ, ಅವಳದೇ!

★★★

ಒಬ್ಬ ಕುಡುಕ ತನ್ನ ಬೈಕ್ ಹತ್ತಿ ಸ್ಮಶಾನದ ಒಂದು ದ್ವಾರದಿಂದ ಒಳಗೆ ಪ್ರವೇಶಿಸಿ ಮತ್ತೊಂದು ದ್ವಾರದಿಂದ ಹೊರಬಂದ ನಂತರ ಉದ್ಗರಿಸಿದ: ಇದಾವ ಸುಡುಗಾಡು ರಸ್ತೆ ಅದೆಷ್ಟು ಸ್ಪೀಡ್ ಬ್ರೇಕರುಗಳನ್ನು ಹಾಕಿದ್ದಾರೆ!

★★★




ಒಬ್ಬ ಮಹಿಳೆ ಪೊಲೀಸ್ ಠಾಣೆಗೆ ಹೋಗಿ 'ಇನ್ಸ್‌ಪೆಕ್ಟರ್, ನನ್ನ ಪತಿ ಕಾಣೆಯಾಗಿ ನಾಲ್ಕು ದಿವಸಗಳಾದವು. ಅವರನ್ನು ಯಾವಾಗ ಪತ್ತೆಮಾಡುತ್ತೀರಾ?' ಎಂದು ಕೇಳಿದಳು.

ಇನ್ಸ್‌ಪೆಕ್ಟರ್: ಬೇಗನೆ ಪತ್ತೆ ಮಾಡುತ್ತೇವೆ. ನಿನ್ನೆ ಹೈವೇ ಪಕ್ಕದಲ್ಲಿ ನಿಮ್ಮ ಪತಿ ಧರಿಸಿದ್ದ ಒಂದು ಜೊತೆ ಸಾಕ್ಸ್ ದೊರೆತಿದೆ. ಅದನ್ನು ಮೂಸಿ ನೋಡಿದ ನಮ್ಮ ನಾಯಿ ಮೂರ್ಛೆ ಹೋಗಿದೆ. ಅದು ಎಚ್ಚರಗೊಂಡ ಮೇಲೆ ನಿಮ್ಮ ಪತಿ ಎಲ್ಲಿದ್ದಾರೆಂದು ಪತ್ತೆ ಮಾಡುತ್ತೇವೆ.

★★★

ತಿಮ್ಮನ ಗೆಳೆಯ: ನೀನು ನಿನ್ನ ಮನೆಯ ಎದುರಿಗೆ ನಿಂತಿರುವ ಟ್ರಕ್ಕನ್ನು ಕಂಡು ಅಷ್ಟೇಕೆ ಹೆದರಿಕೊಳ್ಳುತ್ತಿರುವೆ?

ತಿಮ್ಮ: ಮೂರು ತಿಂಗಳ ಹಿಂದೆ ಈ ಟ್ರಕ್ ಡ್ರೈವರ್ರೇ ನನ್ನ ಹೆಂಡತಿಯನ್ನು ಅಪಹರಿಸಿಕೊಂಡು ಹೋಗಿದ್ದ. ಈಗ ಪುನಃ ಬಂದಿದ್ದಾನೆ. ಎಲ್ಲಿ ಅವಳನ್ನು ವಾಪಸ್ಸು ತಂದು ಬಿಡುತ್ತಾನೋ ಎಂದು ಹೆದರಿಕೆಯಾಗುತ್ತಿದೆ!

★★★

ಒಂದು ಸ್ಪೆಲ್ಲಿಂಗ್ ಮಿಸ್ಟೇಕಿನಿಂದಾಗಿ ಒಂದು ಪುಸ್ತಕದ ಎರಡು ಲಕ್ಷ ಪ್ರತಿಗಳು ಒಂದೇ ದಿನದಲ್ಲಿ ಮಾರಾಟವಾದವು. ತಪ್ಪಾದದ್ದು ಪುಸ್ತಕದ ಟೈಟಲ್‌ನಲ್ಲಿ. ಪುಸ್ತಕದ ಹೆಸರು An idea which can change your life ಎಂದು ಇರಬೇಕಾದದ್ದು An idea which can change your wife ಎಂದು ಪ್ರಕಟವಾಗಿತ್ತು.

(ಸಂಗ್ರಹ) **ಮುರಲೀಧರ ಕುಲಕರ್ಣಿ, ಬೀದರ್**

ಆಸ್ಪತ್ರೆಯಲ್ಲಿ ದಾಖಲಾಗಿದ್ದ ಗುಂಡನ ರಕ್ತ ಪರೀಕ್ಷೆಗಾಗಿ ರಕ್ತ ತೆಗೆದುಕೊಳ್ಳಲು ಆತನ ಕೊಠಡಿಗೆ ಬಂದ ನರ್ಸ್ ಪಕ್ಕದಲ್ಲಿದ್ದ ಸೇಬು ಹಣ್ಣುಗಳನ್ನು ಗಮನಿಸಿ 'ದಿನಕ್ಕೊಂದು ಸೇಬು ವೈದ್ಯರನ್ನು ದೂರವಿರಿಸುತ್ತದೆ, ಅಲ್ಲವೇ?' ಎಂದು ಮಾತಿಗಿಳಿದಳು.

'ಹೌದು, ಈ ಮಾತು ನೂರು ಪ್ರತಿಶತ ಸತ್ಯ. ಮೂರು ದಿನಗಳಿಂದ ನನ್ನ ಬಳಿ ಯಾವ ವೈದ್ಯರೂ ಬಂದಿಲ್ಲ ಸಿಸ್ಟರ್' ಎಂದುಸುರಿದ ಗುಂಡ!

★★★

ಕಾಲೇಜ್ ವಿದ್ಯಾರ್ಥಿ ಗುಂಡ ತನ್ನ ಗೆಳೆಯನೋರ್ವನಿಗೆ ಮೂರು ಬಾರಿ ಫೋನ್ ಮಾಡಿದರೂ ಆತ ಎತ್ತಲಿಲ್ಲ. ಅನ್ಯ ದಾರಿ ಕಾಣದೆ ಗುಂಡ ಆತನಿಗೊಂದು ಎಸ್ಸೆಮ್ಮೆಸ್ ರವಾನಿಸಿದ 'ಅವಳು ನಿನ್ನ ಫೋನ್ ನಂಬರ್ ಕೇಳುತ್ತಿದ್ದಳು'

ಬಳಿಕ ಗುಂಡನಿಗೆ ಆ ಗೆಳೆಯನಿಂದ 30 ಕಾಲ್ ಬಂದರೂ ಗುಂಡ ಎತ್ತಲಿಲ್ಲ!

★★★

ಗುಂಡ ತನ್ನ ಗರ್ಲ್ ಫ್ರೆಂಡ್‌ಗೆ ಇನ್ನೇನು ಕಿಸ್ ನೀಡುವವನಿದ್ದ. ಅಷ್ಟರಲ್ಲಿ ಆಕೆ ತಡೆದು ನಾಚುತ್ತಾ ಉಸುರಿದಳು, 'ಬೇಡ, ಬೇಡ... ಇದೆಲ್ಲಾ ಮದುವೆಯ ಮೊದಲು ಬೇಡ ಡಾರ್ಲಿಂಗ್...'

ರೋಮಾಂಚಕ ಮೂಡ್‌ನಲ್ಲಿದ್ದ ಗುಂಡ ತಾನೇನು ನುಡಿಯುತ್ತಿರುವೆನೆಂಬ ಪರಿಜ್ಞಾನವಿಲ್ಲದೆ ತಕ್ಷಣ ಹೇಳಿದ: 'ನೀನೇನೂ ಹೆದರಬೇಡ ಸ್ವೀಟ್ ಹಾರ್ಟ್, ನನಗಾಗಲೇ ಮದುವೆಯಾಗಿದೆ!'

★★★

ಗುಂಡ: ಒಂದು ರೂಪಾಯಿಯ ಒಂದು ನಾಣ್ಯ ನಿನ್ನನ್ನು ಲಕ್ಷಾಧಿಪತಿಯನ್ನಾಗಿಸಲು ಸಾಧ್ಯ, ಗೊತ್ತೆ?

ಗೋಪಿ: ಗೊತ್ತಿಲ್ಲ ಕಣೋ, ಅದು ಹೇಗೆ ಸಾಧ್ಯ?

ಗುಂಡ: ಒಂದೇ ಒಂದು ಷರತ್ತು... ಅದೇನೆಂದರೆ ನಿನ್ನ ಬಳಿ 99999 ರೂಪಾಯಿ ಇರಬೇಕು, ಅಷ್ಟೇ!

★★★

ಕಿರಾಣಿ ಅಂಗಡಿಯೊಂದರಲ್ಲಿ ಗಮನ ಸೆಳೆದ ಸೂಚನಾಫಲಕ:
ಇಲ್ಲಿ ಸಾಲ ಕೊಡಲಾಗುವುದಿಲ್ಲ ಏಕೆಂದರೆ.
ಸಾಲದ ಲೆಕ್ಕವಿಡಲು ಗುಮಾಸ್ತನಿಲ್ಲ.
ವಸೂಲಿಗೆ ಕಳುಹಿಸಲು ಹುಡುಗರಿಲ್ಲ.
ಬೆಳಿಗ್ಗೆ–ಸಾಯಂಕಾಲ ನಿಮ್ಮ ಮನೆಯತ್ತ ಸವಾರಿ ಹೋಗಲು ವಾಹನವಿಲ್ಲ.
ಪದೇ ಪದೇ ಕರೆ ಮಾಡಲು ಮೊಬೈಲ್‌ನಲ್ಲಿ ಕರೆನ್ಸಿ ಇಲ್ಲ.
ಜಗಳವಾಡಿ ಹಣ ವಸೂಲಿ ಮಾಡಲು ಗೂಂಡಾಗಳನ್ನಿಟ್ಟಿಲ್ಲ.
ನಿಮ್ಮ ಮರ್ಜಿಗಾಗಿ ಕಾಯುತ್ತಿರಲು ಅಪರಾಧಿಯೇನಲ್ಲ.
ಸಾಮಾನು ಕೊಟ್ಟು ಹಣ ಮರೆತುಬಿಡಲು ಕುಬೇರನ ಸಂಬಂಧಿಯಲ್ಲ.
ಗ್ರಾಹಕ ರಾಜನಾಗಿರುತ್ತಾನೆ ಮತ್ತು ರಾಜನೆಂದೂ ಸಾಲ ಕೇಳುವುದಿಲ್ಲ!

(ಸಂಗ್ರಹ) **ರಮಣ್‌ಶೆಟ್ಟಿ ರೆಂಜಾಳ್, ಮುಂಬೈ**